ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 67-72
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ನೇಮಿಚಂದ್ರರ ಕಥೆಗಳಲ್ಲಿ ಚಿತ್ರಿತವಾಗಿರುವ ಪುರುಷ ಪಾತ್ರಗಳ ಭಿನ್ನ ಚಹರೆಗಳು

ಡಾ.ದೇವಿಕ.ಎಸ್[1] ಮತ್ತು ಡಾ. ರಾಜೇಶ್ ಬೆಜ್ಜಂಗಳ.[2]

[1]ಪೋಸ್ಟ್ ಡಾಕ್ಟೋರಲ್ ಫೆಲೋ, ಕನ್ನಡ ವಿಭಾಗ (ಆರ್ಟ್ಸ್ ಅಂಡ್ ಹ್ಯುಮಾನಿಟಿ), ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು ಹಾಗೂ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

[2]ಸಂಶೋಧನಾ ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು, ಕನ್ನಡ ವಿಭಾಗ (ಆರ್ಟ್ಸ್ ಅಂಡ್ ಹ್ಯುಮಾನಿಟಿ), ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

**Abstract:**

*ಮಹಿಳಾ ಕಥಾ ಸಾಹಿತ್ಯ ಎಂದರೆ 'ಸ್ತ್ರೀವಾದಿ ಸಾಹಿತ್ಯ' ಎನ್ನುವಂತಹ ಪೂರ್ವಗ್ರಹ ಪೀಡಿತವಾದಂತಹ ಗ್ರಹಿಕೆಯ ನೆಲೆಗಟ್ಟು ಇರುವುದನ್ನು ಕಾಣಬಹುದು. ಅವರ ಕಥೆಗಳಲ್ಲಿ ಪುರುಷ ಸಮಾಜದ ಲೋಪದೋಷಗಳ ಹಿನ್ನೆಲೆಯಲ್ಲಿ ಸ್ತ್ರೀ ಸಂವೇದಿಯಾದ ಪ್ರತಿಭಟನೆ, ಹೋರಾಟದ ಸ್ವರಗಳನ್ನು ನಾವು ಕಾಣುತ್ತೇವೆ. ಆದರೆ ಇಂತಹ ಸ್ತ್ರೀ ಸಂವೇದನೆ ನಿಲುವುಗಳು ಸಾಹಿತ್ಯದ ಸಾಧ್ಯತೆಗಳನ್ನು ಮಿತಿಗೊಳಿಸುತ್ತದೆ. ಆದರೆ ಆಧುನಿಕ ಕನ್ನಡ ಸಾಹಿತ್ಯ ಸಂವೇದನೆ ಧರ್ಮ, ಜಾತಿ, ಪ್ರಭುತ್ವ ಮುಂತಾದ ಅಧಿಕಾರ ಕೇಂದ್ರಿತ ನೆಲೆಗಳನ್ನು ದಾಟಿ ನಿಂತಿದೆ. ಆಧುನಿಕ ಸಂವೇದನೆ ಬಹುತೇಕ ಪೂರ್ವಗ್ರಹಗಳಿಂದ ಮುಕ್ತವಾಗಿ ಮನುಷ್ಯ ಸಂಬಂಧಗಳನ್ನು ಸ್ಥಾಪಿಸಿರುವುದರಿಂದ ಸಾಂಸ್ಕೃತಿಕ ಚಿಂತನೆಗಳು ಸಂಕೀರ್ಣತೆಯಿಂದ ಕೂಡಿದೆ. ನೇಮಿಚಂದ್ರರು ತಮ್ಮ ಬರವಣಿಗೆಯಲ್ಲಿ ಹೆಣ್ಣಿನ ಮನಸ್ಥಿತಿ ಅಷ್ಟೇ ಅಲ್ಲದೆ, ಪುರುಷ ದ್ವೇಷದ ವೈಪರೀತ್ಯಗಳಿಂದ ಮುಕ್ತರಾಗಿ ವಾಸ್ತವದ ರಚನೆಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ.*

**Keywords:** *ಆಧುನಿಕ ಕನ್ನಡ ಸಾಹಿತ್ಯ, ಮಹಿಳಾ ಸಾಹಿತ್ಯ, ನೇಮಿಚಂದ್ರ, ಪುರುಷ ಪಾತ್ರಗಳು.*

## ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯ ಸಂವೇದನೆ ಧರ್ಮ, ಜಾತಿ, ಪ್ರಭುತ್ವ ಮುಂತಾದ ಅಧಿಕಾರ ಕೇಂದ್ರಿತ ನೆಲೆಗಳನ್ನು ದಾಟಿ ನಿಂತಿದೆ. ಆಧುನಿಕ ಸಂವೇದನೆ ಬಹುತೇಕ ಪೂರ್ವಗ್ರಹಗಳಿಂದ ಮುಕ್ತವಾಗಿ ಮನುಷ್ಯ ಸಂಬಂಧಗಳನ್ನು ಸ್ಥಾಪಿಸಿರುವುದರಿಂದ ಸಾಂಸ್ಕೃತಿಕ ಚಿಂತನೆಗಳು ಸಂಕೀರ್ಣತೆಯಿಂದ ಕೂಡಿದೆ. ನವ್ಯೋತ್ತರ ಅವಧಿಯಲ್ಲಿ ಎಪ್ಪತ್ತರ ದಶಕದಿಂದೀಚೆಗೆ ಹುಟ್ಟಿರುವ ಹೊಸ ಆಲೋಚನಾ ನೆಲೆಗಳಿಂದ ಸಮಾಜದ ಹಲವು ಸ್ಥರಗಳಿಂದ ಬಂದ ಲೇಖಕಿಯರು ಕಥಾ ಸಾಹಿತ್ಯಕ್ಕೆ ತಮ್ಮ ಅಭೀಪ್ಸೆಗಳ ಮೂಲಕ ಹೊಸ ಮನ್ವಂತರವನ್ನೇ ಸೃಷ್ಟಿಸಿದರು. ಆ ಕಾಲದ ಪ್ರಮುಖ ಲೇಖಕರೇ ಕೌಟುಂಬಿಕ ಸಂಬಂಧಗಳ ನಿಜಸ್ವರೂಪವನ್ನು ಪ್ರಶ್ನಿಸತೊಡಗಿದ್ದರೂ ಸನಾತನ ನಂಬಿಕೆಗಳನ್ನು ಮೌಢ್ಯಗಳನ್ನು ಚರ್ಚೆಗೆ ತರುವ ಮೂಲಕ ಸ್ತ್ರೀ–ಪುರುಷರ ಲಿಂಗಾಧಾರಿತ ಅಸಮಾನತೆಯ ನೆಲೆಗಳ ಪ್ರಶ್ನಾರ್ಹತೆಯನ್ನು ದಾಖಲಿಸಿದರು. ಆದರೆ ಇದಕ್ಕೆ ಭಿನ್ನವಾದ ಅಂತಹ ಲೇಖಕಿ ನೇಮಿಚಂದ್ರ, ಇವರು

**Please cite this article as:** ದೇವಿಕ.ಎಸ್ ಮತ್ತು ರಾಜೇಶ್ ಬೆಜ್ಜಂಗಳ. (2024). ನೇಮಿಚಂದ್ರರ ಕಥೆಗಳಲ್ಲಿ ಚಿತ್ರಿತವಾಗಿರುವ ಪುರುಷ ಪಾತ್ರಗಳ ಭಿನ್ನ ಚಹರೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 67–72.

ಕನ್ನಡ ಸಾಹಿತ್ಯದ ಹೊಸ ಪೀಳಿಗೆಯ ಕತೆಗಾರ್ತಿಯರಲ್ಲಿ ಗಮನಾರ್ಹರಾಗಿದ್ದಾರೆ. ಅವರ ಬರವಣಿಗೆಯಲ್ಲಿ ಹೆಣ್ಣಿನ ಮನಸ್ಥಿತಿ ಅಷ್ಟೇ ಅಲ್ಲದೆ, ತೀವ್ರವಾದ ಅಂತಹ ಪುರುಷ ದ್ವೇಷದ ವೈಪರೀತ್ಯಗಳಿಂದ ಮುಕ್ತರಾಗಿ ವಾಸ್ತವದ ರಚನೆಗೆ ಹೆಚ್ಚು ಮಹತ್ವವನ್ನು ಕೊಟ್ಟಿರುವವರು ನೇಮಿಚಂದ್ರರವರು.

ನೇಮಿಚಂದ್ರರ ನಾಲ್ಕು ಕಥಾ ಸಂಕಲನಗಳು ಪ್ರಕಟವಾಗಿವೆ. ಇದರ ಜೊತೆಗೆ ಒಂದು ನೀಳ್ಗತೆಯನ್ನೂ ಬರೆದಿದ್ದಾರೆ. ಈ ಎಲ್ಲಾ ಕಥೆಗಳನ್ನು ಅಂಕಿತ ಪುಸ್ತಕದವರು ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು ಎಂಬ ಶೀರ್ಷಿಕೆಯಡಿ ಹೊರ ತಂದಿದ್ದಾರೆ. ಇತ್ತೀಚಿನ ಕಥೆಗಳು (2000–2011), ಒಂದು ಶ್ಯಾಮಲ ಸಂಜೆ (1992–1999), ಮತ್ತೆ ಬರೆದ ಕತೆಗಳು (1985–1992), ನಮ್ಮ ಕನಸುಗಳಲ್ಲಿ ನೀವಿದ್ದಿರಿ (1975–1985) ಇವು ನೇಮಿಚಂದ್ರರ ಕಥಾ ಸಂಕಲನಗಳಾಗಿವೆ.

ನೇಮಿಚಂದ್ರರ ಕಥೆಗಳಲ್ಲಿ ವಾಸ್ತವ ಬದುಕಿನ ಅನಾವರಣ ಹಾಗೂ ಮಾನವ ಸಂಬಂಧದ ಸೂಕ್ಷ್ಮತೆಯನ್ನು. ಸಹಜ ಕ್ರಿಯೆಯಲ್ಲಿ ಅಡ್ಡಿಯಾಗುವ ಅಡೆತಡೆಗಳನ್ನು ಮೆಟ್ಟಿ ನಿಲ್ಲುವಲ್ಲಿ ನಾಯಕ–ನಾಯಕಿಯರು ಇವರ ಕಥೆಯಲ್ಲಿ ನಿಸ್ಸೀಮರಾಗಿದ್ದಾರೆ. ಪ್ರಸ್ತುತ ಅಧ್ಯಯನದ ಹಿನ್ನಲೆಯಲ್ಲಿ ನೇಮಿಚಂದ್ರರ ಕಥೆಗಳಲ್ಲಿ ಪುರುಷ ಪಾತ್ರಗಳು ವಿಶಿಷ್ಟವಾಗಿ ಕಂಡುಬರುತ್ತವೆ. ಆತ ಸ್ನೇಹಿತನಾಗಿ, ಗಂಡು ಗಂಡನಾಗಿ, ಪ್ರೇಮಿಯಾಗಿ, ಕಾವ್ಯಾಭಿಮಾನಿಯಾಗಿ ನಾನಾ ರೂಪಗಳಲ್ಲಿ ಬರುತ್ತಾನೆ. ಹೆಂಡತಿಯನ್ನು ತನ್ನ ಪ್ರಾಣ ಸಖಿಯಂತೆ ಕಂಡು ಆಕೆಯ ಒಲುಮೆಯ ಅನುಗುಣವಾಗಿ ತನ್ನ ಬದುಕನ್ನು ಬದಲಿಸಿಕೊಳ್ಳುವ ಅಂತಹ ಪ್ರಯತ್ನವನ್ನು ಕಥೆಗಳಲ್ಲಿ ಮಾಡುತ್ತಾನೆ. ಅವಳ ಮೇಲೆ ದಬ್ಬಾಳಿಕೆ ನಡೆಸುವ, ಅವಳ ಸೂಕ್ಷ್ಮ ಮನಸ್ಸಿಗೆ ನೋವು ಕೊಡುವ ಗಂಡಂದಿರು ಬರುತ್ತಾರೆ. ಆದರೆ ಸಾಮಾನ್ಯವಾಗಿ ಇಂತಹ ಗಂಡಂದಿರನ್ನು ಪಡೆದ ಕಥಾನಾಯಕಿಯರು ಬಾಳನ್ನು ಗೋಳು ಮಾಡಿಕೊಂಡು ಕೂರದೆ ಹೊಸ ರೀತಿಯಲ್ಲಿ ಬದುಕನ್ನು ಎದುರಿಸುವ ಕ್ರಮಗಳನ್ನು ಕಲಿಯುತ್ತಾರೆ. ಗಂಡ ಕೌಟುಂಬಿಕ ಜವಾಬ್ದಾರಿಗಳನ್ನು ಹಂಚಿಕೊಳ್ಳುವವನಾಗಿಯೂ ಚಿತ್ರಿತನಾಗಿದ್ದಾನೆ. ಒಂದು ರೀತಿಯಲ್ಲಿ ಇಂತಹ ಗಂಡನ ನೆಲೆಯನ್ನು ಚಿತ್ರಿಸುವಾಗ ನೇಮಿಚಂದ್ರ ಅವರು ತುಂಬ ಆಧುನಿಕ ನೆಲೆಯಲ್ಲಿ ಚಿಂತಿಸುತ್ತಾರೆ. ಇಂತಹ ಗಂಡಂದಿರು ಎಲ್ಲಾ ಹೆಂಗಸರ ಕನಸು. ಹೆಣ್ಣು ಕನಸು ಕಾಣುವಂತಹ ಗಂಡನಾಗಬೇಕಾದರೆ ಆತನಲ್ಲಿ ವಿದ್ಯೆ ಇರಬೇಕು. ವಿನಯತೆ ಇರಬೇಕು. ಹೆಣ್ಣಿನ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವವನಾಗಿರಬೇಕು ಮತ್ತು ಪಿತೃಪ್ರಧಾನ ವ್ಯವಸ್ಥೆಯಾಚೆಗೆ ನೋಡುವ ಮನಸ್ಸು ಬೇಕು. ಈ ದೃಷ್ಟಿಯಿಂದ ನೇಮಿಚಂದ್ರ ಅವರು ವಾಸ್ತವ ಸ್ಥಿತಿಯಲ್ಲಿ ಕತೆಗಳಲ್ಲಿ ಇದನ್ನು ಅರ್ಥೈಸಿದ್ದಾರೆ. ಏಕೆಂದರೆ ಓದಿ ವಿದ್ಯಾವಂತರಾದ ಗಂಡುಗಳೆಲ್ಲರೂ ಪಿತೃಪ್ರಧಾನ ಚೌಕಟ್ಟಿನಾಚೆಗೆ ನಿಂತು ಸ್ತ್ರೀಯ ಪ್ರತಿಭೆಯನ್ನು ಗೌರವಿಸಿಬಿಡುತ್ತಾರೆ ಎಂದು ಹೇಳಲಾಗದು.

ಪ್ರಸ್ತುತ ಲೇಖನದಲ್ಲಿ ಪ್ರಮುಖವಾದಂತಹ ಕೆಲವೊಂದು ಕಥೆಗಳನ್ನು ಗ್ರಹಿಕೆಯ ನೆಲೆಗಟ್ಟಿಗೆ ತೆಗೆದುಕೊಂಡು ಅಲ್ಲಿನ ಪುರುಷ ಪಾತ್ರಗಳ ಬಗೆಗಿನ ವಿಶ್ಲೇಷಣೆಯಿಂದ ಮಾಡಲಾಗುತ್ತದೆ. ನೇಮಿಚಂದ್ರರ 'ಇತ್ತೀಚಿನ ಕಥೆಗಳು' ಎಂಬ ಕಥಾ ಸಂಪುಟದಲ್ಲಿನ 'ಮರಳಿ ಬದುಕಿಗೆ ಈ ಪಯಣ' ಕಥೆಯಲ್ಲಿ ಗಂಡಿನಲ್ಲೂ ಹೆಣ್ಣಿನ ಅಂತಃಸತ್ವದ ಗುಣ ಇರುತ್ತದೆ ಎಂಬುದನ್ನು ಈ ಕಥೆಯ ಮೂಲಕ ತಿಳಿಯಬಹುದು. 'ಪ್ರತಿ ಯಶಸ್ವಿ ಗಂಡಿನ ಹಿಂದೆ ಮಹಿಳೆ ಇರುತ್ತಾಳೆ' ಎಂಬುದಕ್ಕೆ ತದ್ವಿರುದ್ಧವಾದ 'ಯಶಸ್ವಿ ಮಹಿಳೆ ಹಿಂದೆ ಪುರುಷ ನಿರುತ್ತಾನೆ' ಎಂಬುದಕ್ಕೆ ಸಾಕ್ಷಿಯಾಗಿ ಈ ಕಥೆಯ 'ರಿಪುದಮನ್' ನಮಗೆ ಕಾಣಸಿಗುತ್ತಾರೆ. 'ತನ್ನ ಹೆಂಡತಿ ಸುಧಾ ಬೆಳಗಿನ ಜಾವದ ಜಾಗಿಂಗ್ ಹೋದಾಗ ತಲೆಗೆ ಬಲವಾದ ಪೆಟ್ಟು ಬಿದ್ದು ಆಸ್ಪತ್ರೆ ಸೇರುತ್ತಾಳೆ. ಈ

ಕಾರಣದಿಂದಾಗಿ ಆಕೆಗೆ ಹಳೆಯದೆಲ್ಲವೂ ಸಹ ಮರೆತುಹೋಗುತ್ತದೆ ಆದರೆ ಇಂತಹ ಸಂದರ್ಭದಲ್ಲಿಯೂ ರಿಪುದಮನ್ ಆಕೆಯ ಕೈಬಿಡಲಿಲ್ಲ. ಪ್ರತಿಯೊಂದು ಹಂತದಲ್ಲಿಯೂ ಆಕೆಗೆ ಹಳೆಯ ನೆನಪುಗಳು ಬರುವಂತೆ ಮಾಡುವ ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತಾರೆ. ಸುಧಾಳಿಗೆ ಯಾವುದೋ ನೆನಪಿರಲಿಲ್ಲ ಮೂರು ತಿಂಗಳ ಸಾವಿನಂಚಿನಿಂದ ಹೋರಾಟ ಮುಗಿಸಿ ಬಂದ ಆಕೆಗೆ ರಿಪು ನಿನ್ನ ಗಂಡ, ಇವಳು ಪುಟ್ಟಿ ನಿನ್ನ ಮಗಳು, ಎಂದು ಪಾಠದಂತೆ ಹೇಳಿಕೊಡುವ ಮನಸ್ಥಿತಿಯೂ ರೀಪುವನ್ನ ನೋವಿನ ಹಂಚಿನಲ್ಲಿ ತಳ್ಳಿದ್ದವು. "ಮನುಷ್ಯ ಅಂದರೆ ಅವನ ವ್ಯಕ್ತಿತ್ವ, ಬುದ್ಧಿ, ಆಸ್ತಿ, ಅಂತಸ್ತು, ಡಿಗ್ರಿ, ಹುದ್ದೆ ಏನೇನೋ ಅಂದುಕೊಳ್ಳುತ್ತೇವೆ. ಮನುಷ್ಯ ಎಂದರೆ ನೆನಪುಗಳು, ಹಿಡಿ ಹಿಡಿ ನೆನಪುಗಳು, 'ನಾನಾರೆಂಬ ನೆನಪುಗಳು', 'ನೀನಾರೆಂಬ ನೆನಪುಗಳು', ನೆನಪುಗಳಿಲ್ಲದ ಜೀವ ಬರೀ ತೊಗಲ ಚೀಲ, ಮೊದಲ ಬಾರಿಗೆ ಅರಿವಾಗಿತ್ತು."[1] ಎಂಬ ಪರಿಶುದ್ಧ ಮನೋಭಾವದ ಪ್ರೀತಿಯ ಪುರುಷ ಪಾತ್ರವಾಗಿ ರೀಪು ಈ ಕತೆಯಲ್ಲಿ ಗಮನಾರ್ಹನಾಗಿದ್ದಾನೆ

ಕತೆಗಾರ್ತಿಯರು ವಾಸ್ತವದಲ್ಲಿ ಇರುವಂತಹ ಪುರುಷ ಪಾತ್ರಗಳನ್ನು ತಮ್ಮ ಕಥೆಗಳಲ್ಲಿ ಪ್ರತಿನಿಧಿಸಿದರೆ ನಮ್ಮ ನೇಮಿಚಂದ್ರರು 'ತಣ್ಣನೆಯ ಕಣಿವೆಯಲಿ ಒಂದು ಪ್ರೀತಿಯ ಕನಸು' ತಮ್ಮ ಕಥೆಯಲ್ಲಿ ಅವಾಸ್ತವದಲ್ಲಿರುವ ಲದಾಕಿ ಪ್ರೇಮಿಯೊಬ್ಬನ ಚಿತ್ರಣವಿದೆ. ಈತ ತಾನು ಪ್ರೀತಿಸಿದ ಹುಡುಗಿಯನ್ನು ಕಳೆದುಕೊಳ್ಳುತ್ತಾನೆ. ತನ್ನ ಪರಿಸರದ ಹೊಂದಿಕೆಯಲ್ಲಿ ಆಗುವಂತಹ ಕಷ್ಟಗಳನ್ನು ಎದುರಿಸಿ ಆಕೆ ಪ್ರೀತಿಯೆಂದರೆ ಆಕರ್ಷಣೆ ಎನ್ನುವಂತಹ ಮನಸ್ಥಿತಿಗೆ ಬಂದು ತಲುಪುತ್ತಾಳೆ. ಹಿಮಂಕ್ ಪ್ರೀತಿಯೆಂದರೆ ಕೇವಲ ಗಂಡು–ಹೆಣ್ಣಿನ ಇಚ್ಛಾಶಕ್ತಿಗಿಂತಲೂ ಮೀರಿದ್ದು, ಎಂಬ ಆಶಯಕ್ಕೆ ಒಳಗಾಗುತ್ತಾನೆ ಹಿಮಂಕ್ "ನೋವಿನ ನೆಂಟಸ್ತಿಕೆಯಲ್ಲಿ ಪ್ರೀತಿಯ ಕ್ಷಣಗಳಿರುವುದು. ಅವನಿಗೂ ಗೊತ್ತಿತ್ತು, ಆಡದೆಯೇ ಅರ್ಥವಾಗುವ ಮಾತುಗಳು. ಇರುಳ ಕತ್ತಲೆಯಲ್ಲಿ ಹಗಲು ಗನಸುಗಳೇಕೆ? ಎಣ್ಣೆ ತೀರಿದ ಹಣತೆಯಂತೆ ನನ್ನ ಪ್ರೀತಿ ಮಂಕಾಗಿತ್ತು".[2] ಕಥೆಯ ನಾಯಕಿಯು ವಾಸ್ತವದ ಅರಿವಿನಿಂದಾಗಿ ಹಿಮಾಂಕ್ ನಿನ್ನಲ್ಲಿ ಕೊರತೆಗಳಿಲ್ಲ. ಬಿಸಿಲ ನೆಲದಲ್ಲಿ ಚಿಗುರೊಡೆದ ಪ್ರೀತಿ ತಣ್ಣನೆಯ ಕಣಿವೆಯಲ್ಲಿ ಕರಗಿತ್ತು. ತನ್ನ ಮನಸ್ಸಿನ ಮೌನದೊಂದಿಗೆ ಆಡಿದ ಮಾತುಗಳು ಆತನಿಗೆ ತಲುಪಲಿಲ್ಲ ಎಂದಲ್ಲ ಆದರೆ ಆತನ ಪ್ರೀತಿಯ ತುಂಬಿದಂತಹ ಕಳಕಳಿಯ ಕಾಳಜಿಯ ಪ್ರೀತಿ ಇವಳ ಹೃದಯವನ್ನು ಆಕೆಯನ್ನು ಬಂಧಿಸಿತ್ತು. ಹಿಮಾಂಕನ ಪಾತ್ರದಲ್ಲಿ ಲೇಡ್ನ ಗುಣಗಳನ್ನು ಕಾಣಬಹುದು.

ನೇಮಿಚಂದ್ರರ ಒಂದು ಶಾಮಲ ಸಂಜೆ ಕಥಾ ಸಂಪುಟದಲ್ಲಿನ 'ಬದುಕು ಕಾಯುವುದಿಲ್ಲ' ಕಥೆಯಲ್ಲಿ ಜಾಗತೀಕರಣದ ಪ್ರತಿರೂಪವಾಗಿ ಈ ಕಥೆಯ 'ವಿಶು' ಕಂಡುಬರುತ್ತಾನೆ. ತಾನು ಮದುವೆಯಾದ ಅಂತಹ ಒಂದು ಹೆಣ್ಣಿನ ಭಾವನೆಯನ್ನು ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವಂತಹ ಪುರುಷ ಪಾತ್ರವಾಗಿರುವ ಮೂಡಿ ಬಂದಿರುವುದನ್ನು ಕಾಣಬಹುದು. ಕೇವಲ ತನ್ನ ಒತ್ತಾಸೆಯ ತನ್ನ ಮನಸ್ಥಿತಿಯ ತನ್ನ ಭಾವನೆಗಳಿಗೆ ಅಷ್ಟೇ ಸೀಮಿತವಾಗಿ ತಾನು ಕೆಲಸ ಮಾಡುವಂತಹ ಕಚೇರಿಯ ವಿಚಾರಗಳನ್ನೇ ಎಲ್ಲಾ ಕಾಲದಲ್ಲಿಯೂ ತನ್ನ ತಲೆಯಲ್ಲಿ ತುಂಬಿಕೊಂಡು ಇರುವಂತಹ ವಿಶು. ಎಲ್ಲ ಭಾವನೆಗಳ ಸಂಬಂಧಗಳನ್ನು ದೂರೀಕರಿಸಿ ಮಹತ್ವಾಕಾಂಕ್ಷಿ ಆದಂತಹ ಪುರುಷನಾಗಿ ಈ ಕತೆಯಲ್ಲಿ ಕಂಡುಬರುತ್ತಾನೆ. ಕೊನೆಯಲ್ಲಿ ಅವನ ವಾಸ್ತವಕ್ಕೆ ಸಂಬಂಧಗಳ ಅರಿವು ಬಂದಾಗ ತನ್ನ ಹೆಂಡತಿ

[1] ನೇಮಿಚಂದ್ರ. (2016). *ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು.* ಪು. 35

[2] ಅದೇ, ಪು. 58

ಸಂಯುಕ್ತಳಲ್ಲಿ ತನ್ನೆಲ್ಲ ಮನಸ್ಥಿತಿಯನ್ನು ಹಂಚಿಕೊಳ್ಳುತ್ತಾನೆ.

'ನೆನಪುಗಳು ನೋಯಲಿಲ್ಲ' ಕಥೆಯಲ್ಲಿ ದ್ವಿಮುಖ ಗುಣದ ಗೋಪು ಮತ್ತು ರವಿ ಎಂಬ ಪುರುಷ ಪಾತ್ರಗಳನ್ನು ಕಾಣುತ್ತೇವೆ. ಹೆಂಡತಿ ಸಾವಿತ್ರಿ ಬಯಸುವ ಪೌರುಷ ಯುಕ್ತ ನಾಯಕನ ಗುಣಕ್ಕೆ ವಿರುದ್ಧ ಗುಣದ ಗಂಡನಾದ ಗೋಪು ಇದ್ದಾನೆ. ಆದರೆ ಈತ ಹೆಂಡತಿಗೆ ಪ್ರೀತಿಯನ್ನು ಕೊಡುತ್ತಾನೆ ಹೊರತು ಬಯಸುವ ಪೌರುಷ ಯುಕ್ತತನವನ್ನು ನೀಡಲಾಗುವುದಿಲ್ಲ. ಈ ವಿಷಯದಲ್ಲಿ ಗೋಪುವಿನ ಸ್ನೇಹಿತ ರವಿ ಸಾವಿತ್ರಿಗೆ ಹತ್ತಿರವಾಗುತ್ತಾನೆ. ಗಂಡಿನಲ್ಲಿ ಪೌರುಷವನ್ನು ಬಯಸುವ ಸಾವಿತ್ರಿ ಗಂಡನಿಂದ ದೂರವಾಗಿ ಕೊನೆಗೆ ರವಿಯ ಆಕರ್ಷಣೆಗೆ ಒಳಗಾಗಿದ್ದ ಅದು ಕೇವಲ ವಾಸ್ತವವೆಂದು ತಿಳಿದು, ಪ್ರೀತಿ ಇದ್ದರೆ ಎಲ್ಲ ಪಡೆದಂತೆ ಎಂದು ಗಂಡನಿಂದ ಪ್ರಭಾವಿತರಾಗುತ್ತಾಳೆ. ಸಾವಿತ್ರಿಗೆ ತನ್ನ ಮಗಳು ಹೇಳುವ "ಅಪ್ಪನಲ್ಲಿ ನೀ ಪ್ರೀತಿಗಿಂತ ಪೌರುಷವನ್ನು ನಿರೀಕ್ಷಿಸಿದೆ ಅಮ್ಮ.. ನಿನ್ನ ವ್ಯಾಖ್ಯಾನದ ಪೌರುಷವನ್ನು"[3] ಇದು ಸರಿಯಾಗಿ ಅರ್ಥೈಸಿಕೊಳ್ಳಬೇಕಾದ ಅಂತಹ ವ್ಯಕ್ತಿತ್ವಗಳ ಮಾದರಿಯನ್ನು ಪರಿಚಯಿಸುತ್ತದೆ.

"ಸಾವಿನತ್ತ ಒಂದು ಹೆಜ್ಜೆ" ಕಥೆಯಲ್ಲಿ ಭಗ್ನ ಪ್ರೇಮಿಯಾದ ರವಿ ಆಶಾವಾದಿಯಾಗಿ ಬದುಕನ್ನು ನಡೆಸುವಂತಹ ಕಥೆ ಇದೆ. ತಾನು ಪ್ರೀತಿಸಿದ ಹುಡುಗಿಯಿಂದ ತಿರಸ್ಕೃತನಾಗಿ ಆತ್ಮಹತ್ಯೆಗೆ ಮುಂದಾಗುವ ರವಿಗೆ ಶಶಿಯ ಆತ್ಮಹತ್ಯೆ ಮನಪರಿವರ್ತನೆಯಾಗುವಂತೆ ಮಾಡುತ್ತದೆ. ಪ್ರೇಯಸಿ ಬಿಟ್ಟನಂತರ ಅಥವಾ ಮೋಸ ಮಾಡಿದಳು ಎಂದು ಸಾಯಲು ಹೊರಡುವ ಇಂದಿನ ಆಧುನಿಕ ಜಗತ್ತಿನ ಯುವ ಸಮುದಾಯಕ್ಕೆ ರವಿಯ ಆಶಾದಾಯಕವಾದ ಜೀವನ ಅವರಿಗೆ ದಾರಿದೀಪವಾಗಿದೆ ಎಂದು ಹೇಳಬಹುದು. ಶಶಿಯು ಮಾನಸಿಕವಾಗಿ ಬದುಕಿನ ದುಸ್ತರವಾದ ಜೀವನವನ್ನು ಎದುರಿಸಲಾಗದೆ ತಂದೆಯ ಮರಣದ ನಂತರ ಸೈನೈಡ್ ಸೇವಿಸಿ ಸಾಯುತ್ತಾಳೆ. ಈ ಸನ್ನಿವೇಶ ರವಿಯ ಆತ್ಮಹತ್ಯೆಯ ನಿರ್ಧಾರವನ್ನೇ ಬುಡಮೇಲು ಮಾಡಿ ಯಾರಿಗೋಸ್ಕರವೋ ನಮ್ಮ ಅಮೂಲ್ಯ ಜೀವವನ್ನು ಕಳೆದುಕೊಳ್ಳುವ ತಪ್ಪು ನಿರ್ಧಾರ ಮಾಡಬಾರದು "ಒಮ್ಮೆ ಸಾವನ್ನು ಸ್ಪರ್ಶಿಸಿ ಸಮೀಪ ನಿಂತು ಸಂಭಾಷಿಸಿ ಬಂದಿದ್ದೇನೆ.. ಬಹುಶಃ ಬದುಕನ್ನು ಯಾರು ಪ್ರೀತಿಸಿದಷ್ಟು ಗಾಢವಾಗಿ ನಾನು ಪ್ರೀತಿಸಬಲ್ಲೆ"[4] ಈ ರೀತಿ ಸ್ವಗತವಾಗಿ ಆತ್ಮವಿಮರ್ಶೆ ಮಾಡಿಕೊಳ್ಳುವ ರವಿ. ಈ ಮೂಲಕ ಆಶಾವಾದಿಯಾದಂತಹ ಪುರುಷ ಪಾತ್ರ ಚಿತ್ರಣ ಈ ಕತೆಯಲ್ಲಿ ಮೂಡಿಬಂದಿದೆ.

'ಕಪ್ಪು ಮೋಡ ಬೆಳ್ಳಿ ಅಂಚು' ಕಥೆಯಲ್ಲಿ ಹೆಂಡತಿಯ ಮೇಲೆ ಆಕರ್ಷಣೆ ಕಳೆದುಕೊಂಡು ಮತ್ತೊಂದು ಮದುವೆಯಾಗುವ ಗಂಡ ರವಿ ಎಂಬ ಪುರುಷ ಪಾತ್ರವಿದೆ. ಇಂಥ ಗಂಡಂದಿರಿಗೆ ಹೆದರಬಾರದು ಎಂಬಂತೆ ಆತನ ಹೆಂಡತಿ ಮಧು, ದುರಾದೃಷ್ಟದಿಂದ ಅವಳ ಪಾಲಿಗೆ ಸುಖ ಮರೀಚಿಕೆಯಾದರೂ, ಕಾರೋಡದ ಅಂಚಿನಲ್ಲಿ ನೇಯ್ದ ಬೆಳ್ಳಿಗೆರೆಗಳ ಹಾಗೆ, ಆತನೊಂದಿಗೆ ಇರುವ ಬದುಕನ್ನು ಸಂಪೂರ್ಣವಾಗಿ ತಿರಸ್ಕರಿಸಿ ತನ್ನ ಮಗಳನ್ನು ಸ್ವಾಭಿಮಾನದಿಂದ ಬೆಳೆಸುತ್ತಾಳೆ. ಇಲ್ಲಿರುವ ಪುರುಷ ಪಾತ್ರ ಹೆಣ್ಣಿನ ಬದಲಾದ ಮನೋಧರ್ಮಕ್ಕೆ ಮೂಲ ಕಾರಣವಾಗಿ ಚಿತ್ರಿತನಾಗಿದ್ದಾನೆ.

ಸ್ತ್ರೀ ಸಂವೇದನೆ, ಸ್ತ್ರೀವಾದಿ ಮೊದಲಾದ ಪದಗಳನ್ನು ಬಳಸುವಂತಹ ಆಧುನಿಕೋತ್ತರ ಕಾಲಘಟ್ಟದಲ್ಲಿ, ಪುರುಷ ಸಂವೇದನೆಯನ್ನು ರೂಪಿಸುವಂತಹ ಕಥೆಗಳನ್ನು ಬರೆದವರು ನೇಮಿಚಂದ್ರರು. ಅವರ 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕಥೆಯಲ್ಲಿ ಹೆಣ್ಣಿನ ವಿಕೃತ ಮನಸ್ಸಿಗೆ ಒಳಗಾಗುವ ಗಂಡ ಸುಂದರ್ ಮತ್ತು ಪ್ರಿಯತಮ

[3] ಅದೇ. ಪು. 179

[4] ಅದೇ. ಪು. 222

ಕಿರಣ್ ಎಂಬ ಎರಡು ಪಾತ್ರಗಳಿವೆ. ಗಂಡನ ಬೇಜವಾಬ್ದಾರಿ ತನದಿಂದ, ಆತನಿಗೆ ಬದುಕಿನ ಬಗೆಗೆ ಇದ್ದಂತಹ ಅನಾಸಕ್ತಿ, ಇದೆಲ್ಲದರಿಂದ ಅವನನ್ನು ತೊರೆಯುವ ಕಾವ್ಯ ಕಿರಣನ ತೋಳ ತೆಕ್ಕೆಗೆ ಬಿದ್ದು, ಆತನ ಸ್ವಾರ್ಥಪರವಾದಂತಹ ಬದುಕಿಗೆ ಸಿಕ್ಕಿಹಾಕಿಕೊಂಡು ಅದರಿಂದ ಹೊರಬಂದು ಗಂಡನ ಜೊತೆಯಲ್ಲಿ ಮತ್ತೆ ಮುನ್ನಡೆಯಲು ಹಾತೊರೆಯುತ್ತಾಳೆ. ಇಲ್ಲಿ ಉತ್ತಮ ಬದುಕುಸಾಗಿಸಬೇಕೆನ್ನುವ ಉತ್ಕಟ ಅಭೀಪ್ಸೆವುಳ್ಳ ಹೆಣ್ಣಿಗೆ ಯಾವ ಪುರುಷನಿಂದಲೂ ಈಡೇರಿಸುವ ಗುಣವಿಲ್ಲ ಎನ್ನುವ ಸೂಕ್ಷ್ಮಸಂವೇದನೆ ಇದೆ. "ನಮ್ಮ ಪ್ರೇಮಕ್ಕೆ ಮತ್ತೊಂದು ಅವಕಾಶ ಕೊಡಲು ಸಾಧ್ಯವೇ? ಒತ್ತಾಯವಲ್ಲ ನಿನ್ನ ಸಮಾಜದ ಹೆದರಿಕೆ ಅಥವಾ ಕನಿಕರನನ್ನ ಸ್ವೀಕಾರಕ್ಕೆ ಕಾರಣವಾಗದಿರಲಿ, ನನ್ನನ್ನು ನನ್ನ ಪರಿಸರದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾದರೆ ನನ್ನ ವರ್ತನೆಗಳು ಹಿಂದಿನ ತುಮುಲ ತಿಳಿಯಾದರೆ ಮತ್ತೊಮ್ಮೆ ಪ್ರಾರಂಭಿಸೋಣ ಸುಂದರ್"[5] ಎನ್ನುವ ಕಾವ್ಯಳ ಮಾತುಗಳು ಪುರುಷ ಮನಸ್ಥಿತಿಯು ಹೆಣ್ಣನ್ನು ನೋಡಬೇಕಾದ ರೀತಿಯನ್ನು ಹೇಳುತ್ತವೆ.

ನೇಮಿಚಂದ್ರರ 'ನನ್ನದಲ್ಲದ ಬದುಕಿಗಾಗಿ' ಕಥೆಯಲ್ಲಿ ಅಮಾನವೀಯ, ಮೃಗೀಯ ಗುಣದ ಗಂಡನಾದ ಅಕ್ಷಯ ಪುರುಷ ಪಾತ್ರವಿದೆ. ಮೊದಲ ರಾತ್ರಿಗೂ ಮುನ್ನವೇ ಸರೂವನ್ನು ದೈಹಿಕವಾಗಿ ವಶಪಡಿಸಿಕೊಂಡು ಎರಡು ತಿಂಗಳಲ್ಲಿ ಅಕ್ಷಯ ಸಾವಿಗೀಡಾಗುತ್ತಾನೆ. ಆದರೆ ಸರೂನ ಜೀವನದ ದಿಕ್ಕು ತಪ್ಪುತ್ತದೆ. ಗರ್ಭಿಣಿಯಾದ ಸರೂಗೆ ಮರುಮದುವೆಯಾಗಲು ಸಾಧ್ಯವಾಗದೆ ವಿಧವೆಯಾಗಿಯೇ ಕಾಲ ದೂಡಬೇಕಾಗುತ್ತದೆ. "ಒಂದು ಹೆಣ್ಣು ಗಂಡ ತನ್ನ ಮೈಗೆ ಕೈ ಹಾಕುವ ಮೊದಲು ತನ್ನ ಪ್ರೇಮವನ್ನು ಸಾವಿರ ಬಗೆಯಲಿ ಸಾಧಿಸಿ ಸಾಬೀತುಪಡಿಸಬೇಕು"[6] ಎಂಬ ನೀತಿಗೆ ಇಲ್ಲಿನ ಪುರುಷನು ನಿದರ್ಶನವಾಗಿದ್ದಾನೆ. ಗರ್ಭಪಾತ ಮಾಡಿಸಲು ಮುಂಬೈಗೆ ಸ್ನೇಹಿತೆಯೊಂದಿಗೆ ಹೋಗುವ ಅನುವಿಗೆ ಮನಃಪರಿವರ್ತನೆಯ ಮಾತುಗಳನ್ನಾಡುವ ಪುರುಷನಾಗಿರುವ ಡಾಕ್ಟರನ ಚಿತ್ರಣವಿದೆ. ಈ ಡಾಕ್ಟರನಿಂದಲೇ ಅನು ಹೊಸ ಜೀವವನ್ನು ಭೂಮಿಗೆ ನೀಡಲು ಸಾಧ್ಯವಾಗಿದೆ.

ಸ್ತ್ರೀಸಮಾನತೆ ಎನ್ನುವುದು ದೇಶಕಾಲ ಸಂಸ್ಕೃತಿ ಇವೆಲ್ಲವನ್ನೂ ಪ್ರಭಾವಿಸುತ್ತಾ ಆಯಾ ಸಂದರ್ಭಕ್ಕೆ ತಕ್ಕ ಸ್ವರೂಪವನ್ನು ಪಡೆಯುತ್ತಾ ಬಂದಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ನೇಮಿಚಂದ್ರರು ತಮ್ಮ ಕಥೆಗಳಲ್ಲಿ ಹೆಣ್ಣಿನ ಅಸ್ಮಿತೆಯ ಭಿನ್ನ ಆಯಾಮಗಳನ್ನು ತಂದುಕೊಟ್ಟರು ಹಾಗೆಯೇ ವಾಸ್ತವ ಸ್ಥಿತಿಯಲ್ಲಿನ ಪುರುಷರ ಅಸ್ಮಿತೆಯ ಭಿನ್ನ ಆಯಾಮಗಳನ್ನು ಸಹ ತಮ್ಮ ಕಥೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಇವರ ಇನ್ನೂ ಹಲವು ಕಥೆಗಳಲ್ಲಿ ಇವರ ಬಹುಪಾಲು ಕಥೆಗಲ್ಲಿ ಮಧ್ಯಮ ವರ್ಗದ ಪುರುಷ ಪಾತ್ರಗಳೇ ಚಿತ್ರಿತವಾಗಿವೆ. ಈ ಪುರುಷರು ನಗರ ಜೀವನದಲ್ಲಿ ಇರುವಂಥವರು ಹಾಗೂ ವೈವಾಹಿಕ ಜೀವನವನ್ನು ಅನುಭವಿಸುವ, ಹಾಳುಮಾಡಿಕೊಳ್ಳುವ ಮಾದರಿಯವರು, ತನ್ನ ಮಡದಿಗೆ ಸಂತೋಷ ನೀಡುವ, ಅವಳ ಭಾವನೆಗಳನ್ನು ತಿರಸ್ಕರಿಸುವ ಅವಮಾನಿಸುವ ಸಮಾಜವು ದೂರೀಕರಿಸುವ ಅಕ್ರಮ ಸಂಬಂಧಗಳನ್ನು ಮಾಡಿಕೊಳ್ಳುವ, ತನ್ನ ಕಚೇರಿ ಕೆಲಸದಲ್ಲಿ ಮಗ್ನರಾಗುವ ತನ್ನನ್ನೇ ತಾನು ಮರೆತುಹೋಗುವ. ಕೇವಲ ತೋರಿಕೆಯ ಪ್ರೀತಿಯನ್ನು ನೀಡಿ ಬದಲಾಗುವ, ತಂದೆ–ತಾಯಿ ಹಾಗೂ ತನ್ನ ಸಂಬಂಧಿಕರಿಗಾಗಿ, ಅವರಿಗೋಸ್ಕರ ಹೆಂಡತಿಯ ಜೊತೆಗಿರುವ, ಸಂಪದ್ರಾಯಕ್ಕೆ ಅಂಟಿಕೊಂಡಿರುವ, ಹೆಂಡತಿಯ ತಿರಸ್ಕಾರಕ್ಕೆ ಗುರಿಯಾಗುವ ಎಲ್ಲಾ ಗುಣಗಳ ಗಂಡಂದಿರುಗಳು ಇವರ ಕಥೆಗಳಲ್ಲಿ ಕಾಣಸಿಗುತ್ತಾರೆ. ಅಲ್ಲದೆ ಪುರುಷನ ಇನ್ನೊಂದು ಅಸ್ಮಿತೆಯಾದ ಕಾಡುವ, ಬೇಡುವ. ಮದುವೆಯಾಗಲು ಆಗದಿದ್ದರೂ ಪ್ರೀತಿಸುವ, ಮದುವೆಯಾದಾಗಲೂ ಸುಖ ಸಂಸಾರ ನಡೆಸಲು

[5] ಅದೇ. ಪು. 312
[6] ಅದೇ. ಪು. 391

ಸಾಧ್ಯವಾಗದ ಪ್ರೇಮಿಗಳಿದ್ದಾರೆ. ಇವರು ತ್ಯಾಗಮಯಿಗಳಂತೆ, ಶೋಷಕರಂತೆ, ಸ್ಪೂರ್ತಿಯಂತೆ ಚಿತ್ರಿತರಾಗಿದ್ದಾರೆ. ಮಿಕ್ಕ ಬಗೆಯ ಪುರುಷ ಪಾತ್ರಗಳು ಇವರ ಕಥೆಗಳಲ್ಲಿ ವಿವರಿಸುವಷ್ಟು ಪ್ರತಿನಿಧಿಸುವುದಿಲ್ಲ ಎಂದು ಹೇಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಹೊನ್ನು ಸಿದ್ಧಾರ್ಥ. ಸಿ.ಬಿ. (2014). *ಆಧುನಿಕ ಕನ್ನಡ ಸಾಹಿತ್ಯ ಮಹಿಳಾ ಸಣ್ಣಕಥೆಗಳ ಅವಲೋಕನ* . ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.
- ನೇಮಿಚಂದ್ರ. (2016). *ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು.* ಅಂಕಿತ ಪುಸ್ತಕ.
- ಪದ್ಮಿನಿ ನಾಗರಾಜ್ ಎಸ್.ಪಿ. (2020). *ಮಹಿಳಾ ಸಾಹಿತ್ಯ ಸಂಪುಟ: ಕಥೆ.* ಕನ್ನಡ ಸಾಹಿತ್ಯ ಪರಿಷತ್ತು.